ನಗೆದಿನ ವಿಶೇಷ

ಮೈಮನಗಳ ತಣಿವನ್ನೆಲ್ಲ ಬಸಿಯುವಂತಹ ಬಿಸಿಲ ಝಳ, ಜನ ಜಾನುವಾರುಗಳ ಮೋರೆಯಲ್ಲಿ ಕಳವಳ ಮೂಡಿಸಿರುವ ಅಂತರ್ಜಲ. ನೀರಿನ ಕೊರತೆ ಮತ್ತು ಬಿಸಿಲ ಧಗೆಯ ನಡುವೆಯೂ ನಾವು ಉಳಿಸಿಕೊಳ್ಳಬೇಕಾಗಿದೆ ತುಟಿಗಳಲ್ಲಿ ನಗೆ, ಹೊರಹಾಕಬೇಕಾಗಿದೆ ಅಂತರಂಗದಲ್ಲಿನ ಹಗೆ. ಏಪ್ರಿಲ್ 1ರ ‘ನಗೆದಿನ’ದ ಹಿನ್ನೆಲೆಯಲ್ಲಿ ರೂಪುಗೊಂಡಿರುವ ಈ ನಗೆಸಂಚಿಕೆ, ಸಹೃದಯರ ಮುಖದ ಬಿಗುವನ್ನು ಕೊಂಚವಾದರೂ ಸಡಿಲಿಸಿ, ಮನಸ್ಸಿಗೆ ಆಹ್ಲಾದವನ್ನು ತುಂಬುತ್ತದೆನ್ನುವುದು ‘ಸುಧಾ’ ಬಳಗದ ನಂಬಿಕೆ. ಮಂದಹಾಸ ನಿಮ್ಮದಾಗಲಿ, ಆ ನಗುವನ್ನು ಹಂಚುವ ಶಕ್ತಿ ನಿಮಗೆ ದೊರೆಯಲಿ.



# ಓ ನನ್ನ ಚೇತನ ಆಗು ನೀ ನಗೆಕೇತನ

ತುಟಿಗಳನ್ನು ತೊರೆಯದಿರಲಿ ಮಂದಹಾಸ
ಎಲ್ಲೆಡೆ ಮಿನುಗಲಿ, ಎಲ್ಲರದಾಗಲಿ ಸುಹಾಸ